# ಅರಳಿ ನಿಲ್ಲು Lyrics in Kannada

ಅರಳಿ ನಿಲ್ಲು ನೋವಿನಲ್ಲೂ
ಎದೆಯ ನೋವು ಮುದುಡಿ ಹೋಗುವುದು
ನಗುವ ಚೆಲ್ಲು ಅಳುವಿನಲ್ಲೂ
ಇರುಳ ಹಿಂದೆ ಬೆಳಕು ಮೂಡುವುದು

ಚದುರಿದಂತೆ ಮನದ ಭಾವ
ನಡೆಯೋ ಮುಂಚೆ ಎಡವೋ ಜೀವ
ಚಿಗುರಬೇಕು ನಾಳೆಯ ಸೆಳೆಗೆ

ಕಣ್ಣ ಹನಿಯು ಕೆನ್ನೆ ಮೇಲೆ
ಕುಳಿತು ಕೇಳಿದರೂ
ಬರುವುದೆ ಕ್ಷಣ ಉಳಿವುದೇ
ನಗು ಬಾಳಿಗೆ ಬಿರಿದು

ಕಳೆದು ಹೋದ ಘಳಿಗೆ ನೂರು
ಮರುಗಿ ನರಳಿದರೇ…
ಸಿಗುವದೇ ಸುಖ ಸವೆಯದೆ
ಬದುಕೆಲ್ಲಿ ಮುಗಿಯುವುದು

ನೆರಳು ನೀಡೋ ಮರದ ಸೂರು
ಕೊಡಲಿ ನೋಡಿದರೂ
ನಮ್ಮವನೇ ಇವ ನಮ್ಮವನೇ
ಎಂದು ನಗುತ ಕೂಗುವುದು

ಅಳಿದ ಮೇಲೂ ಸಿಗುವ ಬಾಳು
ದೇವರ ವರವು
ಉಳಿಸಿಕೋ ಇದ ಬೆಳೆಸಿಕೋ
ಇಂದು ಬಿಡಿಸಿ ಹೇಳುವುದು

ಚದುರಿದಂತೆ ಮನದ ಭಾವ

Bharatlyrics.com
ನಡೆಯೋ ಮುಂಚೆ ಎಡವೋ ಜೀವ
ಚಿಗುರಬೇಕು ನಾಳೆಯ ಸೆಳೆಗೆ.

---

*More Lyrics from [Tom And Jerry]()*